೨) ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಇಪ್ಪತ್ತು ಅಂಶಗಳ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದು

ಶ್ರೀ ಬಿ. ಆರ್. ನಿಲಕಂಠಪ್ಪ (ತರೀಕೆರೆ).—ಮಾನ್ಯ ಅಧ್ಯಕ್ಷರೆ, ಈ ಕೆಳಗಿನ ಅಂಶಗಳ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಅ) ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಇಪ್ಪತ್ತು ಅಂಶಗಳ ಕಾರ್ಯಕ್ರಮಗಳು ಜಿಲ್ಲಾ ಮಟ್ಟದಲ್ಲಿ ಈಗಲೂ ಅನುಷ್ಠಾನವಲ್ಲಿ ಇವೆಯೆ ?

ಆ) ೧೯೮೬ರ ನಂತರ ಪ್ರತಿ ಜಿಲ್ಲೆಯಲ್ಲೂ ಎಷ್ಟು ಸಾರಿ ಪ್ರತಿ ತಿಂಗಳೂ ಸಭೆ ಕರೆದು ಪ್ರಗತಿಯನ್ನು ವಿಮರ್ಶಿಸಿದ್ದಾರೆಂಬುದನ್ನು ತಿಳಿಸುವಿರಾ ?

ಇ) ಈ ಸಭೆಗಳಿಗೆ ಆಯಾಯ ಜಿಲ್ಲೆಯ ಜಿಲ್ಲಾ ಮಂತ್ರಿಗಳನ್ನು, ಜಿಲ್ಲೆಯ ಎಲ್ಲಾ ಶಾಸಕರನ್ನು ಕರೆಯಲಾಗಿದೆಯೆ ?

ಈ) ಜಿಲ್ಲಾ ಪರಿಷತ್ತು ಕಾರ್ಯಚರಣೆಗೆ ಬಂದನಂತರ ಈ ಜಿಲ್ಲಾಮಟ್ಟದ ಅಭಿವೃದ್ಧಿ ಸಮಿತಿ ರದ್ದುಪಡಿಸಲಾಗಿದೆಯೆ ?

ಉ) ಈ ಅಭಿವೃದ್ಧಿ ಸಮಿತಿ ಯಾವ ಹಂತದಲ್ಲಿ ಯಾರ ಅಧ್ಯಕ್ಷತೆಯಲ್ಲಿ ಯಾವ ಯಾವ ಅಧಿಕಾರಿಗಳ ಮತ್ತು ಅಧಿಕಾರೇತರ ಸದಸ್ಯರನ್ನು ಒಳಗೊಂಡಿದೆ ತಿಳಿಸಿ ?

ಊ) ರಾಜ್ಯದ ಜಿಲ್ಲಾವಾರು ಅಭಿವೃದ್ಧಿ ಪ್ರಗತಿಯ ಅಂಕಿ ಅಂಶಗಳನ್ನು ಕೊಡುವಿರಾ ?

ಶ್ರೀ ಎಂ. ರಘುಪತಿ.—ಸಂಬಂಧಪಟ್ಟ ಮಂತ್ರಿಗಳು ಆ ಸದನದಲ್ಲಿರುವುದರಿಂದ ಉತ್ತರ ತರಿಸಿ ಕೊಡುತ್ತೇನೆ.

೩) ಶಿವಮೊಗ್ಗ ನಗರದಲ್ಲಿ ಕಸದ ತೊಟ್ಟಿಯಲ್ಲಿ ಬಾಂಬ್ ಸ್ಫೋಟನೆಗೊಂಡಿರುವುದು

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ನಗರದಲ್ಲಿ ದಿನಾಂಕ ೧೨-೮-೮೭ರಂದು ಕಸದ ತೊಟ್ಟಿಯೊಂದರಲ್ಲಿ ಸಿಡಿದ ಬಾಂಬಿನ ಪರಿಣಾಮವಾಗಿ ಕಸದ ತೊಟ್ಟಿಯಲ್ಲಿ ಕಸವನ್ನು ಆರಿಸುತ್ತಿದ್ದ ಚಂದ್ರಮ್ಮ ಮತ್ತು ಮುನಿಯಪ್ಪ ಎಂಬ ಇಬ್ಬರು ಚಿಂದಿ ಎತ್ತುವ ಮಕ್ಕಳು ೨೦ಅಡಿ ದೂರಕ್ಕೆ ಎಸೆಯಲ್ಪಟ್ಟು ಈ ಮಕ್ಕಳು ಶರೀರಗಳುಚಿಂದಿಚಿಂದಿಯಾಗಿ ಸುತ್ತಲು ಹರಡಿದ್ದವು. ಸುದ್ದಿಯಾರಿದಿನ ಪೊಲೀಸಿನವರು ತಜ್ಞರ ಸಹಾಯದಿಂದ ತೊಟ್ಟಿಯನ್ನು ಪರಿಶೀಲಿಸಿದಾಗ ಮತ್ತೊಂದು ನಾಡ ಬಾಂಬು ಪತ್ತೆಯಾಗಿದೆ ಎಂದು ತಿಳಿದುಬಂದಿದೆ.

ನಾಡ ಬಾಂಬು ತೀವ್ರ ಸ್ಫೋಟಕದಾಗಿದ್ದು ಇದರ ತಯಾರಿಕೆ ಬಗ್ಗೆ ನಿಷೇದವಿದ್ದರೂ ಇದು ಎಲ್ಲಿ ತಯಾರಾದದ್ದು ? ಇದರ ಹಿನ್ನೆಲೆ ಏನು ? ಅಂತಹ ಭಾರಿ ಸ್ಫೋಟವಾಗಿ ಮಕ್ಕಳು ಚಿಂದಿ ಚಿಂದಿಯಾಗಿ ಸತ್ತವೆರೆ ಲೂ ಅಲ್ಲಿ ಈ ನಾಡ ಬಾಂಬು ಸಿಕ್ಕಿದುದಾದ್ದರು ಹೇಗೆ ? ಇದು ಎಲ್ಲಿ ತಯಾರಾಗಿದೆ ಎಂಬ ಬಗ್ಗೆ ಸಾರ್ವಜನಿಕರಲ್ಲಿ ಭೀತಿಯ ವಾತವರಣ ಇರುವುದರಿಂದ ಈ ಬಗ್ಗೆ ಸರ್ಕಾರದ ಹೇಳಿಕೆಯನ್ನು ತಿಳಿಯಸುತ್ತೇನೆ.

ಶ್ರೀ ಆರ್. ವಿಲ್. ಜಾಲಪ್ಪ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೆ, ದಿನಾಂಕ ೧೨-೮-೮೭ ರಂದು ಕುಪ್ಪುಸ್ವಾಮಿಯವರ ೧೨ ವರ್ಷದ ಪುತ್ರಿ ಚಂದ್ರಮ್ಮ ಮತ್ತು ರಾಮಸ್ವಾಮಿರವರ ೧೦ ವರ್ಷದ ಪುತ್ರ ಮುನಿಯಪ್ಪ, ಇವರು ಶಿವಮೊಗ್ಗ ರಾಜೇಂದ್ರನಗರ ಬಡಾವಣೆಯ ನಾಲ್ಕನೇ ಅಡ್ಡ ರಸ್ತೆಯ ಮುನಿಸಿಪಲ್ ಕಸದ ತೊಟ್ಟಿಯು ಬಳಿ ಚಿಂದಿ ಆಯುತ್ತಿದ್ದಾಗ ಮಧ್ಯಾಹ್ನ ೧೨-೩೦ರ ಸಮಯದಲ್ಲಿ ಬಲವಾದ ಸ್ಫೋಟ ಸಂಭವಿಸಿತು. ಈ ದೊಡ್ಡ ಸ್ಫೋಟವನ್ನು ಕೇಳಿ ಅಕ್ಕಪಕ್ಕದಲ್ಲಿ ವಾಸಿಸುವವರು ಕೂಡಲೇ ಸ್ಥಳಕ್ಕೆ ಧಾವಿಸಿದರು. ಆಗ ಮಕ್ಕಳು ಗಾಯಗೊಂಡು ಕೆಳಗೆ ಬಿದ್ದಿದ್ದರು. ಕಸದ ತೊಟ್ಟಿಯಿಂದ ಹೊಗೆ ಏಳುತ್ತಿತ್ತು.

೨. ಈ ಬಗ್ಗೆ ಫೋನ್ ಕರೆ ಬಂದಕೂಡಲೇ ಶಿವಮೊಗ್ಗ ಪೋಲೀಸ್ ಡೆಪ್ಯೂಟಿ ಸೂಪರಿಂಡೆಂಟ್ ರವರು ಸ್ಥಳಕ್ಕೆ ಧಾವಿಸಿದರು. ಬಾಲಕಿ ಚಂದ್ರಮ್ಮ ಸ್ಥಳದಲ್ಲಿಯೇ ಮೃತಪಟ್ಟಿದ್ದಳು. ಆಸ್ಪತ್ರೆಗೆ ಸಾಗಿಸುತ್ತಿದ್ದಾಗ ದಾರಿಯಲ್ಲಿ ಬಾಲಕ ಮುನಿಯಪ್ಪ ಮೃತಪಟ್ಟನು.

೩. ಕಾರಣ ಹೊಂದಿದ ಬಾಲಕಿ ಚಂದ್ರಪ್ಪನ ತಂದೆ ಕುಪ್ಪಸ್ವಾಮಿಯವರ ದೂರಿನ ಮೇಲೆ ಶಿವಮೊಗ್ಗದ ಜಯನಗರ ಪೊಲೀಸ್ ಠಾಣೆಯಲ್ಲಿ ಐಪಿಸಿ.ಯ ಪ್ರಕರಣ ೩೦೪ (ಎ) ಮತ್ತು ಭಾರತೀಯ ಸ್ಫೋಟಕ ವಸ್ತು ಕಾಯಿದೆಯಲ್ಲಿ ನಿಯಮ ೫ರಪ್ರಕಾರ ಕೇಸನ್ನು ಅಪರಾಧ ಸಂಖ್ಯೆ.೨೭-೮೭ರಲ್ಲಿ ದಾಖಲು ಮಾಡಿಕೊಳ್ಳಲಾಯಿತು.

೪. ಸ್ಫೋಟಕ ವಸ್ತು ತಜ್ಞರು ಸ್ಥಳಕ್ಕೆ ದಿನಾಂಕ ೧೩-೮-೮೭ರಂದು ಭೇಟಿ ನೀಡಿ ತನಿಖೆ ನಡೆಸಿದರು. ಈ ತನಿಖೆಯಲ್ಲಿ ಸಿಕ್ಕ ಸ್ಫೋಟಗೊಳ್ಳದ ನಾಡ ಬಾಂಬು ಸಹ ಪತ್ತೆಯಾಯಿತು. ತಜ್ಞರು ಅದನ್ನು ವಶಪಡಿಸಿಕೊಂಡು ನಿಷ್ಕ್ರಿಯಗೊಳಿಸಿ ರಸಾಯನಿಕ ವಿಶೇಷ ಪರೀಕ್ಷೆಗಾಗಿ ಬೆಂಗಳೂರಿಗೆ ಕಳುಹಿಸಿದರು. ಅವರ ಪರೀಕ್ಷೆಯ ವರದಿ ಬರಬೇಕಾಗಿದೆ. ಈ ನಾಡ ಬಾಂಬನ್ನು ಸಾಮಾನ್ಯವಾಗಿ ಕ್ರೂರ ಪ್ರಾಣಿಗಳನ್ನು ಕೊಲ್ಲಲು ಬಳಸುತ್ತಾರೆಂದು ತಿಳಿದುಬಂದಿದೆ.

೫. ಈ ಸಂಬಂಧದಲ್ಲಿ ಶಿವಮೊಗ್ಗ ತಾಲ್ಲೂಕಿನ ಕೊಟಗನೂರು ಮತ್ತು ಇರಕಿನ ಕೊಪ್ಪ ಹಳ್ಳಿಗಳಿಗೆ ಸೇರಿದ ಮಾಯಣ್ಣ, ಏಳುಮಲೈ, ಪೆರುಮಾಳ್ ಮತ್ತು ರಾಮಣ್ಣ ಎಂಬುವವರು ಅಕ್ರಮವಾಗಿ ನಾಡಬಾಂಬು ತಯಾರಿಸಿದರೆಂದು ಅನುಮಾನ ಬಂದು ಅವರನ್ನು ಪರೀಕ್ಷಿಸಲಾಯಿತು. ಅವರು ಪರವಾನಿ ಇಲ್ಲದೆ ನಾಡಬಾಂಬನ್ನು ತಯಾರಿಸಿದ್ದಾರೆಂದು ಕೇಸನ್ನು ದಾಖಲು ಮಾಡಿಕೊಳ್ಳಲಾಗಿದೆ. ವಿಚಾರಣೆಯಲ್ಲಿ ಇವರು ತಪ್ಪಿಸ್ಥರೆಂದು ತಿಳಿದುಬಂದಿದೆ.

(೪) ಕರಾವಳಿಯಲ್ಲಿರುವ ಮಂಗಳೂರು ಮತ್ತು ಇನ್ನಿತರ ಬಂದರುಗಳಲ್ಲಿ ಹೂಳೆತ್ತುವ ಕಾರ್ಯವನ್ನು ಕೈಗೊಳ್ಳುವುದು

ಶ್ರೀ ಬಿ. ಎಂ. ಇದಿನಬ್ಬ (ಉಲ್ಲಾಳ).—ಮಾನ್ಯ ಅಧ್ಯಕ್ಷರೆ, ಕರಾವಳಿಯಲ್ಲಿರುವ ಮಂಗಳೂರು ಮತ್ತು ಇನ್ನಿತರ ಕಡೆಗಳಲ್ಲಿ ಅಳಿವೆ ಬಾಗಿಲಿನಲ್ಲಿ ಹೂಳೆತ್ತುವ ಕಾರ್ಯ ಭಾರಿ ಅನಿವಾರ್ಯವಾದುದು. ಆದರೆ ಆ ಕಾರ್ಯ ಇನ್ನೂ ಆಗಿಯೇ ಇಲ್ಲ. ಮಂಗಳೂರು ಅಳಿವೆ ಬಾಗಿಲಲ್ಲಿ ಕಳೆದ ನಾಲ್ಕು ವರ್ಷಗಳಿಂದ ಹೂಳೆತ್ತದೇ ಇದ್ದುದರಿಂದ ಅನೇಕ ಬೋಟುಗಳು ಮರಗಳಿಗೆ ತಾಗಿ ಮುಳುಗಿಹೋದವು. ಹತ್ತಕ್ಕೂ ಮಿಕ್ಕಿ ಜೀವಗಳ ಆಹುತಿಯಾಯಿತು. ಕಳೆದ ಎರಡು ವರ್ಷಗಳಲ್ಲಿ ಈ ಹೂಳೆತ್ತುವ ಕುರಿತು ಹಿಂದಿನ ವಿಾನುಗಾರಿಕಾ ಸಚಿವರಲ್ಲಿ ನಿವೇದಿಸಲಾಗಿದೆ. ಅವರು ಬಂದು ನೋಡುತ್ತಾರೆ, ವಿಧಾನ ಸಭೆಯಲ್ಲೂ ಪ್ರಶ್ನಿಸಲಾಗಿದೆ. ಕೂಡಲೇ ಹೂಳೆತ್ತುವ ಕೆಲಸ ಮಾಡಲಾಗುವುದೆಂದು ಬರೇ ಭರವಸೆಗಳನ್ನು ನೀಡಲಾಗಿದೆಯಲ್ಲದೆ ಹೂಳೆತ್ತುವ ಕಾರ್ಯ ಮಾಡಿಲ್ಲ. ಇದರಿಂದಾಗಿ ಮಾನುಗಾರರು ಭಾರಿ ಕಷ್ಟನಷ್ಟಗಳಿಗೆ ಒಳಗಾಗಿ ಕಂಗಾಲಾಗಿರುತ್ತಾರೆ. ಭರವಸೆ ನೀಡಿ, ಸ್ವತಃ ನೋಡಿ ಹೂಳೆತ್ತದೇ ಇರುವುದು ಅತ್ಯಂತ ಅಪಾಯಕಾರಿ. ಈ ಕುರಿತು ಮಾನುಗಾರಿಕಾ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಎಂ. ರಘುಪತಿ (ಮಾನ್ಯ ಮಾನುಗಾರಿಕಾ ಸಚಿವರು).—ರಾಜ್ಯದ ಕರಾವಳಿಯಲ್ಲಿರುವ ಮಂಗಳೂರು ಮತ್ತು ಇನ್ನಿತರ ಬಂದರುಗಳಲ್ಲಿ ಹೂಳೆತ್ತುವ ಕಾರ್ಯ ಕೈಗೊಳ್ಳುವುದು ಅವಶ್ಯಕ. ಹಳೆ ಮಂಗಳೂರು ಬಂದರಿನ ಅಳವೆಯಲ್ಲಿ ಸೂಕ್ತ ಆಳವಿಲ್ಲವೆಂದು ಹಲವು ವರ್ಷಗಳಿಂದ ಮೇಲಿಂದ ಮೇಲೆ ಮನವಿಗಳು ಬರುತ್ತಿವೆ.

ಈ ಬಗ್ಗೆ ಕಳೆದ ಕೆಲವು ವರ್ಷಗಳಿಂದ ಗುತ್ತಿಗೆಯ ಮೇಲೆ ಹೂಳೆತ್ತುವ ಸಾಧ್ಯತೆಯನ್ನು ಪರಿಶೀಲಿಸಿದೆ. ಸೂಕ್ತ ಹೂಳೆತ್ತುವ ಯಂತ್ರಗಳ ಅಭಾವದಿಂದ ಈ ಕಾರ್ಯವು ಸಾಧ್ಯವಾಗಿಲ್ಲ. ಸಾಮಾನ್ಯವಾಗಿ ಈ ಕೆಲಸಕ್ಕಾಗಿ ಕರೆದ ಟೆಂಡರುಗಳಿಗೆ ಪ್ರತಿಕ್ರಿಯೆಯು ಬಹಳ ಕಡಿಮೆ. ೧೯೮೬ನೇ ಸಾಲಿನಲ್ಲಿ ಪ್ರಮುಖವಾಗಿ ಮಂಗಳೂರು ಅಳಿವೆಯ ಅಭಾವದಿಂದ ಅಳಿವೆಯಲ್ಲಿ ಹಿಂದಿನ ವರ್ಷಕ್ಕಿಂತಲೂ ಸಾಧಾರಣ ಒಂದು ಅಡಿಯಷ್ಟು ನೀರಿನ ಆಳ ಕಡಿಮೆಯಾಗಿದ್ದುದರಿಂದ ವಿಾನುಗಾರಿಕಾ ಹಾಗೂ ಇತರ ವಾಣಿಜ್ಯ ನೌಕೆಗಳಿಗೆ ನೈಸರ್ಗಿಕ ತೊಂದರೆ ಆಗಿದೆಯೆಂದು ತಿಳಿದುಬಂದಿದ್ದುರಿಂದ ಈ ಸಮಸ್ಯೆಯನ್ನು ಪರಿಹರಿಸುವ ಬಗ್ಗೆ ಮಾನುಗಾರಿಕಾ ಸಚಿವರ ಕೊಠಡಿಯಲ್ಲಿ ದಿನಾಂಕ ೧೭-೧೦-೮೬ ಮತ್ತು ೨೮-೧೦-೮೬ ರಂದು ಸಭೆ ನಡೆಸಲಾಯಿತು. ಮಂಗಳೂರು ಬಂದರಿನಲ್ಲಿ ಗುರುಪುರ ಮತ್ತು ನೇತ್ರಾವತಿ ನದಿಗಳಲ್ಲಿ ಸ್ಪರ್ಸ್ (ಅಡ್ಡದಂಡೆಗಳು) ಮತ್ತು ಸಮುದ್ರದಲ್ಲಿ ೨ ಆಲೆ ತಡೆ ದಂಡೆಗಳ ನಿರ್ಮಾಣವಾಗುವರೆಗೆ ಅಳವೆಯಲ್ಲಿ ಹೂಳೆತ್ತುವ ಕಾರ್ಯವನ್ನು ಕೈಗೊಳ್ಳುವುದು ಶಾಶ್ವತ ಪರಿಹಾರವಾಗುವುದಿಲ್ಲವಾದರೂ ತಾತ್ಕಾಲಿಕ ಪರಿಹಾರವನ್ನಾದರೂ ನೀಡುವ ವಿಷಯವನ್ನು ಈ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ಈ ಸಭೆಯಲ್ಲಿ ತೀರ್ಮಾನಿಸಿದಂತೆ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯು ನಿರ್ದೇಶಕರು ಮಂಗಳೂರು ಬಂದರು ಅಧಿಕಾರಿ ಮತ್ತು ವಿಾನುಗಾರರ